ಖಾಕಿ ಕಾವಲಿಗೆ ಎಂಸಿಸಿ ಕಣ್ಣು

■ ಶಿವಶಂಕರ ಕಂಠಿ

ಹುಬ್ಬಳ್ಳಿ: ಕಾನೂನು ಸುವ್ಯವಸ್ಥೆ ಹಾಗೂ ಆಹಿತಕರ ಘಟನೆಗಳ ನಿಯಂತ್ರಣಕ್ಕಾಗಿ ಇರುವ ಆತ್ಯಾಧುನಿಕ ತಂತ್ರಜ್ಞಾನ ಸೌಲಭ್ಯಗಳನ್ನೊಳಗೊಂಡ 'ಮೊಬೈಲ್ ಕಮಾಂಡ್ ಸೆಂಟರ್' (ಎಂಸಿಸಿ)ವಾಹನ ಈಗ ಅವಳಿ ನಗರಕ್ಕೂ ಕಾಲಿರಿಸಿದೆ.

ದೇಶದ ಕೆಲವೇ ನಗರಗಳು ಇಂತಹ ಸೌಲಭ್ಯ ಹೊಂದಿದ್ದು ಅದರಲ್ಲಿ ಹು-ಧಾ ಕೂಡ ಒಂದಾಗಿದೆ. ಈ ವಾಹನಗಳು ಪೊಲೀಸ್ ಸಾಮರ್ಥ್ಯ ಹೆಚ್ಚುವಂತೆ ಮಾಡಿವೆ.

ರಾಜಕೀಯ ಇನ್ನಿತರ ಮೆರವಣಿಗೆ, ಪ್ರತಿಭಟನೆ, ಗಲಾಟೆ ಸಂದರ್ಭದಲ್ಲಿ ಯಾವುದೇ ಆಹಿತಕರ ಘಟನೆಗಳು ನಡೆಯದಂತೆ ಹದ್ದಿನ ಕಣ್ಣಿಡಲು ಎಂಸಿಸಿ ವಾಹನ ಪ್ರಯೋಜನಕಾರಿಯಾಗಿದ್ದು, ಕಾನೂನು ಸುವ್ಯವಸ್ಥೆ ನಿಯಂತ್ರಿಸುವ ನಿಟ್ಟಿನಲ್ಲಿ ಪೊಲೀಸರಿಗೆ ಸಹಕಾರಿಯಾಗಲಿದೆ. ಈ ವಾಹನ ಸುಮಾರು ಒಂದು ಕಿಲೋ ಮೀಟರ್‌ವರೆಗೂ ಹದ್ದಿನ ಕಣ್ಣಿನಲಿದೆ. ಸ್ಥಳದಲ್ಲಿನ ಪರಿಸ್ಥಿತಿ ಕುರಿತು ಸಂಪೂರ್ಣ ಮಾಹಿತಿಯನ್ನು ದೃಶ್ಯಾವಳಿಗಳ ಸಮೇತ ಪೊಲೀಸ್ ಆಯುಕ್ತರಿಗೆ ನೀಡಲಿದೆ. ಅವರು ತಾವಿದ್ದ ಸ್ಥಳದಿಂದಲೇ ಕರ್ತವ್ಯದಲ್ಲಿರುವ ಇಲಾಖೆಯ ಅಧಿಕಾರಿಗಳಿಗೆ ಸಂದೇಶ ರವಾನಿಸುವ ಮೂಲಕ ಪರಿಸ್ಥಿತಿ ನಿಭಾಯಿಸಬಹುದಾಗಿದೆ. ಇದರ ಕಾರ್ಯಾಚರಣೆ ಕುರಿತು ಸಿಬ್ಬಂದಿ ಕೂಡ ತರಬೇತಿ ಪಡೆದಿದ್ದಾರೆ. ಮೊಬೈಲ್ ಕಮಾಂಡ್ ಸೆಂಟರ್ ವಾಹನಕ್ಕೆ ಈ ಹಿಂದಿನ ಗೃಹಮಂತ್ರಿ ರಾಮಲಿಂಗಾರೆಡ್ಡಿ ಅವರು 2018ರ ಜ. 5ರಂದು ಚಾಲನೆ ನೀಡಿದ್ದರು.



ವೈಶಿಷ್ಟ್ಯಗಳೇನು?

ಮೊಬೈಲ್ ಕಮಾಂಡ್ ಸೆಂಟರ್ (ಎಂಸಿಸಿ) ವಾಹನವು ಮೊಬೈಲ್ ಸಿ4 ಐಎಸ್‌ಆರ್ ವೇದಿಕೆಗಳೊಂದಿಗೆ ಹೆಚ್ಚಿನ ಗುಣಮಟ್ಟದ ವಿಡಿಯೋ-ಆಡಿಯೋ ಒಳಗೊಂಡ ದೀರ್ಘ-ಶ್ರೇಣಿಯ ತಂತಿ ಹಾಗೂ ನಿಸ್ತಂತು (ವೈರ್‌ಲೆಸ್) ಕಣ್ಗಾವಲು ಸಾಮರ್ಥ್ಯದೊಂದಿಗೆ ಸಂಯೋಜಿಸಗೊಂಡಿದೆ. ಎಂಸಿಸಿಯಲ್ಲಿ ಕ್ಷೇತ್ರ ನಿಯೋಜಿಸಬಹುದಾದ ನಿಸ್ತಂತು ಬ್ಯಾಟರಿ, ಚಾಲಿತ ಕ್ಯಾಮೆರಾಗಳೆದೆ. ಮಾಸ್ಟ್ ಪಿಟಿಝಡ್ ಸಿಸಿಡಿ/ಥರ್ಮಲ್ ಕ್ಯಾಮೆರಾಗಳೆದೆ. ದೇಹದಲ್ಲಿ ಧರಿಸಬಹುದಾದ ದೂರ-ವ್ಯಾಪ್ತಿ ನಿಸ್ತಂತು ಕ್ಯಾಮೆರಾಗಳೆದೆ. ವಿಡಿಯೋ ನಿರ್ವಹಣೆಗೊಂದಿಗೆ ನೆಟ್ ವರ್ಕ್ ವಿಡಿಯೋ ರೆಕಾರ್ಡರ್, ವಿಡಿಯೋ ಸಾರಾಂಶ ಸಾಫ್ಟ್‌ವೇರ್, 3ಜಿ/4ಜಿ ಮುಖಾಂತರ ರಿಮೋಟ್ ವಿಡಿಯೋ ಪ್ರಸರಣ ವ್ಯವಸ್ಥೆ ಹೊಂದಿದೆ.

ಯಾವಾಗ ಬಳಕೆ?

ಕಾನೂನು-ಸುವ್ಯವಸ್ಥೆ ಜಾರಿಗೆ ಸಹಕಾರಿಯಾಗುವ ನಿಟ್ಟಿನಲ್ಲಿ ಮಿಸ್ಟ್ರಾಲ್‌ನಿಂದ ಮೊಬೈಲ್ ಸಿ4ಐಎಸ್‌ಆರ್ ವೇದಿಕೆಗಳುಳ್ಳ ವಾಹನಗಳನ್ನು ಸಿದ್ಧಪಡಿಸಲಾಗಿದೆ. ಪೊಲೀಸ್ ಮತ್ತು ಆರೋಗ್ಯಕ, ವಿಶೇಷ ಪಡೆಗಳು, ರಕ್ಷಣಾ ಪಡೆಗಳು, ವಿಮಾನ ನಿಲ್ದಾಣಗಳು, ಖಾಸಗಿ ಭದ್ರತಾ ಏಜೆನ್ಸಿಗಳು ವಿಐಪಿ ಭದ್ರತೆ, ಕ್ರೀಡೆ, ಮನರಂಜನೆ, ಪ್ರದರ್ಶನ, ರಾಜಕೀಯ ರ‍್ಯಾಲಿ, ಬೃಹತ್ ಪ್ರಮಾಣದಲ್ಲಿ ನಡೆಯುವ ಪ್ರತಿಭಟನೆಗಳು, ಮೆರವಣಿಗೆ ಸಂದರ್ಭಗಳಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡಲು, ನಡೆಯಬಹುದಾದಂತಹ ಆಹಿತಕರ ಘಟನೆ, ಗಲಾಟೆಗಳನ್ನು ನಿಯಂತ್ರಿಸಲು, ತುರ್ತು/ವಿಪತ್ತು ನಿರ್ವಹಣೆ, ಭದ್ರತಾ ಕಾರ್ಯಾಚರಣೆಗಳನ್ನು ಕೈಗೊಳ್ಳಲು ಸುಲಭವಾಗಿ ಇದನ್ನು ನಿಯೋಜಿಸಿ ಪರಿಹಾರ ಕಂಡುಕೊಳ್ಳಬಹುದಾಗಿದೆ.

ವಾಹನದ ವಿಶೇಷತೆ

ಧ್ವನಿ, ಡೇಟಾ ಮತ್ತು ವಿಡಿಯೋ ಮೂಲಕ ಸಂವಹನ ಮಾಡಲು ಸಹಕಾರಿ.

ತ್ವರಿತವಾಗಿ ನಿಯೋಜನೆ ಮಾಡಲು ಅನುಕೂಲ.

ಎಲ್ಲಾ ಭೂಪ್ರದೇಶಗಳಿಗೆ ಕೊಂಡೊಯ್ಯಲು ಸೂಕ್ತ.

ಸ್ಥಳದ ಪರಿಸ್ಥಿತಿ ಕುರಿತು ಮೊಬೈಲ್ ಕಮಾಂಡ್ ಕೇಂದ್ರದ ಸಿಬ್ಬಂದಿ ಹಿರಿಯ ಅಧಿಕಾರಿಗಳೊಂದಿಗೆ ಪರಸ್ಪರ ಮಾಹಿತಿ ಹಂಚಿಕೊಳ್ಳಲು, ಅವಲೋಕನ ಮಾಡಲು ಇಂಟಿಗ್ರೇಟೆಡ್ ಕಮ್ಯುನಿಕೇಷನ್ ಸಿಸ್ಟಮ್ ಒಳಗೊಂಡಿದೆ.

ಸಮಗ್ರ ಸಂವಹನ ವ್ಯವಸ್ಥೆ

ರ‍್ಯಾಲಿ, ಸಮಾರಂಭದಲ್ಲಿನ ಪರಿಸ್ಥಿತಿ ಕುರಿತು ಹಿರಿಯ ಅಧಿಕಾರಿಗಳು ತಿಳಿಯಲು ಸಂವಹನ ಹಾಗೂ ಪ್ಯಾಚ್ ಅಡಿಯೋಗಾಗಿ ವಿಎಚ್‌ಎಫ್, ಯುಎಚ್‌ಎಫ್, ಎಚ್‌ಎಫ್, ಜಿಎಸ್‌ಎಂ/ಸಿಡಿಎಂಎ, ಪಿಎಸ್‌ಟಿಎನ್, ಟೆಟ್ರಾ, ವಿಐಪಿ ಹಾಗೂ ಉಚಗ್ರಹ ಟರ್ಮಿನಲ್ಸ್ ಇದೆ. ಬಳಕೆದಾರರ ಸ್ನೇಹಿ ಟಚ್ ಸ್ಕ್ರೀನ್ ಅಪ್ಲಿಕೇಶನ್ ಹೊಂದಿದೆ. ಸುಲಭವಾಗಿ ಪ್ಯಾಚಿಂಗ್ ಹಾಗೂ ಕಾನ್ಫರೆನ್ಸಿಂಗ್ ತಂತ್ರಜ್ಞಾನ ಒಳಗೊಂಡಿದೆ.

ಡ್ರೋನ್ ಕಣ್ಗಾವಲು

ಮೊಬೈಲ್ ಸಿ4ಐಎಸ್‌ಆರ್ ವೇದಿಕೆಯು ಕಾಂಪ್ಯಾಕ್ಟ್, ಹೆಚ್ಚಿನ ಬಹುಮುಖಿ ಡ್ರೋನ್‌ವುಳ್ಳ 24/7 ವೈಮಾನಿಕ ಕಣ್ಗಾವಲು ಇದೆ. ಡ್ರೋನ್ ಮೈಕ್ರೋಫಿಲೆಮೆಂಟ್ ಆಧಾರಿತ ಸಂವಹನ ತಂತ್ರಜ್ಞಾನ ಸ್ವಾಮ್ಯದ ಮೂಲಕಗ್ರೌಂಡ್ ಕಂಟ್ರೋಲ್ ಸ್ಟೇಷನ್ (ಜಿಸಿಎಸ್) ನೇರ ಸಂಪರ್ಕ ಹೊಂದಿದೆ. ಇದರೊಂದಿಗೆ ಅದು ವಾಯುಗಾಮಿ ಶಕ್ತಿಯೊಂದಿಗೆ ಸ್ಥಳದಲ್ಲಿನ ಪರಿಸ್ಥಿತಿ ಕುರಿತ ಸಂದೇಶವನ್ನು ದೀರ್ಘಕಾಲದ ವರೆಗೆ ರವಾನಿಸುತ್ತದೆ. ಮೈಕ್ರೋಫಿಲೆಮೆಂಟ್‌ನ್ನು ಎಥರ್ನೆಟ್ ಪ್ರೋಟೋಕಾಲ್ ಸಂವಹನ ಮತ್ತು ಎಚ್‌ಡಿ ವಿಡಿಯೋ ಪ್ರಸರಣಕ್ಕೂ ಬಳಸಲಾಗುತ್ತದೆ.

ನಿಯಂತ್ರಣ ಕೊಠಡಿ

ಮೊಬೈಲ್ ಕಮಾಂಡ್ ಸೆಂಟರ್ ಕನ್ಟಮೈಸ್ಡ್ ಕಾರ್ಯ ಕೇಂದ್ರಗಳೊಂದಿಗೆ ಸಂಪೂರ್ಣ ಹವಾನಿಯಂತ್ರಿತ ಒಳಾಂಗಣ ಹೊಂದಿದ್ದು ಆರಾಮದಾಯಕವಾಗಿ ಕುಳಿತುಕೊಂಡು ವಿಡಿಯೋ ಕಾನ್ಫರೆನ್ಸಿಂಗ್ ಮಾಡಬಹುದು. ಕಾರ್ಯಾಚರಣೆಗಾಗಿ ರೆಫ್ರಿಜರೆಟರ್ ಹಾಗೂ ಕಚೇರಿಗಳಲ್ಲಿರುವ ಪ್ರಿಂಟರ್, ಫ್ಯಾಕ್ಸ್, ಟೆಲಿಫೋನ್ ನೇರಿದಂತೆ ಲ್ಯಾಪ್‌ಟಾಪ್/ಕಂಪ್ಯೂಟರ್ ಚಾರ್ಜಿಂಗ್ ಪೋರ್ಟ್‌ಸೌಲಭ್ಯಗಳಿವೆ. ವಿಐಪಿ ಔಟ್‌ಲೆಟ್ಸ್‌ನೊಂದಿಗೆ ಕಾನ್ಫರೆನ್ಸ್ ಟೇಬಲ್ ಸಹವಿದೆ. ಪೊಲೀಸ್ ಆಯುಕ್ತರು ಹಾಗೂ ಹಿರಿಯ ಅಧಿಕಾರಿಗಳು ಲ್ಯಾಪ್‌ಟಾಪ್ ಮೂಲಕ ಎಲ್‌ಇಡಿ ಟಿವಿಗೆ ಸಂಪರ್ಕ ಕಲ್ಪಿಸಲು ಎಚ್‌ಡಿಎಂಐ ಔಟ್‌ಲೆಟ್ಸ್ ಹಾಗೂ ಯುಎಸ್‌ಬಿ ಪೋರ್ಟ್ಸ್ ಇದೆ. ಎಲ್ಲಾ ವೈರಿಂಗ್ ಎಂಸಿಸಿಯೊಳಗೆಗೆ ಸಮರ್ಪಕವಾಗಿ ಅಳವಡಿಸಲಾಗಿದೆ ಹಾಗೂ ವಿಂಗಡಿಸಲಾಗಿದೆ. ಪ್ರಮಾಣಿತ ಸುರಕ್ಷತೆಗೆ ಕ್ರಮಕೈಗೊಳ್ಳಲಾಗಿದೆ.

100 ಪೇದೆಗಳ ಕೆಲಸಕ್ಕೆ ಸಮ!

ಮೊಬೈಲ್ ಕಮಾಂಡ್ ಸೆಂಟರ್ ವಾಹನ ಒಂದು ಡ್ರೋನ್ ಕ್ಯಾಮರಾ, 19 ಕ್ಯಾಮರಾ ಹೊಂದಿದೆ. ಇದರಲ್ಲಿ 10 ವೈರ್‌ಲೆಸ್ ಟೆಟಲ್‌ವೈಡ್ ಕ್ಯಾಮರಾ, 4 ಬಾಡಿ ರಾವ್ ಕ್ಯಾಮರಾ, 1 ಪೆಂಟೆಲ್ಟ್ ಜೂಮ್ ಕ್ಯಾಮರಾ, ವಾಹನದ ನಾಲ್ಕು ದಿಕ್ಕುಗಳಲ್ಲಿ 4 ಫಿಕ್ಸ್‌ಡ್ ಕ್ಯಾಮರಾ ಇವೆ. ಇದರಲ್ಲಿ ರೆಡಿಯೋ ಹಾಗೂ ಜಿಎಸ್‌ಎಂ ಮೂಲಕ ಸ್ಥಳದಲ್ಲಿನ ಪರಿಸ್ಥಿತಿ ಕುರಿತು ಹಿರಿಯ ಅಧಿಕಾರಿಗಳೊಂದಿಗೆ ಸಮಾಲೋಚನೆ (ಕಾನ್ಫರೆನ್ಸ್) ಮಾಡಬಹುದು. ಮಾನಿಟರಿಂಗ್ ಮಾಡುವಾಗ ಸ್ಥಳದಲ್ಲೇ ನಿರ್ಣಯ ತೆಗೆದುಕೊಳ್ಳಲು ಅವಕಾಶವಿದೆ. ವಿಡಿಯೋ ಸಂಪರ್ಕದೊಂದಿಗೆ ಆಯುಕ್ತರು ತಮ್ಮ ಕಚೇರಿಯಿಂದಲೇ ಸ್ಥಳದಲ್ಲಿನ ಪರಿಸ್ಥಿತಿ ಗಮನಿಸಿ ಮುಂದಿನ ನಿರ್ಧಾರ ಕೈಗೊಂಡು ಪರಿಸ್ಥಿತಿ ನಿಯಂತ್ರಿಸಬಹುದಾಗಿದೆ.

ವೈರ್‌ಲೆಸ್ ಕ್ಯಾಮರಾಗಳು 2ಮೆಗಾ ಪಿಕ್ಸಲ್ ಸಾಮರ್ಥ್ಯದ್ದಾಗಿದ್ದು, ಪೆಂಟೆಲ್ಟ್ ಜೂಮ್ ಕ್ಯಾಮರಾ 18ಕಿಮೀ ವರೆಗಿನ ವ್ಯಾಪ್ತಿಯ ಪ್ರದೇಶದಲ್ಲಿನ ದೃಶ್ಯಾವಳಿಗಳನ್ನು ಸ್ಪಷ್ಟವಾಗಿ ಸೆರೆ ಹಿಡಿಯಬಲ್ಲದು. ಇನ್ನುಳಿದ ಕ್ಯಾಮರಾಗಳು 800 ಮೀಟರ್ ವ್ಯಾಪ್ತಿಯ ಪ್ರದೇಶಗಳ ದೃಶ್ಯಾವಳಿಗಳನ್ನು ಸೆರೆ ಹಿಡಿಯಬಲ್ಲವು. ಎಂಸಿಸಿ ವಾಹನದಲ್ಲಿ ಓರ್ವ ಕಾಂತ್ರಿಕ, ಓರ್ವ ಅಧಿಕಾರಿ, ಓರ್ವ ಚಾಲಕ, ಬಾಡಿ ಕ್ಯಾಮರಾಮನ್ ಸೇರಿ ಒಟ್ಟು ಆರು ಜನರು ಕಾರ್ಯನಿರ್ವಹಿಸಲಿದ್ದಾರೆ. 100ಕ್ಕೂ ಅಧಿಕ ಪೊಲೀಸರು ನಿರ್ವಹಿಸುವ ಕಾರ್ಯವನ್ನು ಇದೊಂದೇ ಕೇಂದ್ರ ನಿರ್ವಹಿಸಲಿದೆ. ಗುಜರಾತ್‌ನ ಅಹ್ಮದಾಬಾದ್ ಹಾಗೂ ನವದೆಹಲಿಯ ಮಾನೆಸರನ ರಾಷ್ಟ್ರೀಯ ಭದ್ರತಾ ಪಡೆ, ಆಸ್ಸಾಂ ಹೆದ್ದಾರಿ ಪೆಟ್ರೋಲಿಂಗ್ ಹಾಗೂ ರಾಜ್ಯದ ಮೈಸೂರು-ಮಂಡ್ಯ ಹೆದ್ದಾರಿ ಪೆಟ್ರೋಲಿಂಗ್ ಮಾಡಲು ಹಾಗೂ ಹು-ಧಾ, ಮೈಸೂರು ಪೊಲೀಸ್ ಕಮಿಷನರೇಟ್‌ನಲ್ಲಿ ಮಾತ್ರ ಇಂತಹ ಎಂಸಿಸಿ ವಾಹನ ಬಳಸಲಾಗುತ್ತಿದೆ.

ವಿಡಿಯೋ ವಾಲ್

ಮೊಬೈಲ್ ಕಮಾಂಡ್ ಕೇಂದ್ರದಿಂದ ತುರ್ತು ನಿರ್ವಹಣಾ ತಂಡಕ್ಕೆ ಪರಿಸ್ಥಿತಿಯ ಅರಿವು ಗೊತ್ತಾಗಲು ಹಾಗೂ ಸಾಮಾನ್ಯ ಕಾರ್ಯಾಚರಣೆಯ ಚಿತ್ರಗಳನ್ನು ನೋಡಲು ನಿಯಂತ್ರಣ ಕೊಠಡಿಯಲ್ಲಿ ಎಲ್‌ಇಡಿ ಟಿವಿಯೊಂದಿಗೆ ವಿಡಿಯೋ ವಾಲ್ ಅಳವಡಿಸಲಾಗಿದೆ. ಕಮಾಂಡ್ ಕೇಂದ್ರದಲ್ಲಿ ವಿವಿಧ ಭಾಗಗಳಲ್ಲಿನ ನಿಸ್ತಂತು ಐಪಿ ಕ್ಯಾಮರಾ ಹಾಗೂ ಡ್ರೋನ್‌ದಿಂದ ಸೆರೆ ಹಿಡಿಯಲಾದ ಚಿತ್ರಗಳನ್ನು ಸಿ4ಐಎಸ್‌ಆರ್ ವೇದಿಕೆ ಒದಗಿಸುತ್ತದೆ. ಯಾವುದೇ ದೂರಸ್ಥಳದಲ್ಲಿ ಸಂವಹನ ಮೂಲಸೌಕರ್ಯ ಇಲ್ಲದಿರುವೆಡೆ ಮೆಶ್ ಆಧಾರಿತ ಮೊಬೈಲ್ ಅಡ್ಹಾಕ್ ನೆಟ್‌ವರ್ಕ್ (ಎಂಎಎನ್‌ಇಟಿ) ರೇಡಿಯೋಗಳು ಧ್ವನಿ ಮತ್ತು ಡೇಟಾವನ್ನು ವರ್ಗಾವಣೆ ಮಾಡುತ್ತವೆ. ಅಡ್ಹಾಕ್ ನೆಟ್‌ವರ್ಕ್ ಮೂಲಕ ಆಯುಕ್ತರು ಕರ್ತವ್ಯದಲ್ಲಿರುವ ಅಧಿಕಾರಿಗಳು, ಸಿಬ್ಬಂದಿಗೆ ಸಂದೇಶಗಳನ್ನು ಕಳುಹಿಸಬಹುದು ಹಾಗೂ ಅವರೊಂದಿಗೆ ಖುದ್ದು ಮಾತಕಾಡಿ ಪರಿಸ್ಥಿತಿಯ ಕುರಿತು ತಿಳಿದುಕೊಳ್ಳಬಹುದು. ಮೊಬೈಲ್ ಕಮಾಂಡ್ ಕೇಂದ್ರದ ವಾಹನವು ಸ್ವಯಂ ಆಗಿ ಡೀಸೆಲ್ ಜೆನ್ಸೆಟ್ ಹಾಗೂ ಒಂದು ಗಂಟೆವರೆಗೆ ಬ್ಯಾಕ್‌ಅಪ್‌ನ ಯುಪಿಎಸ್ ವಿದ್ಯುತ್ ಉತ್ಪಾದನೆಯ ಬ್ಯಾಟರಿ ಒಳಗೊಂಡಿರುತ್ತದೆ. ಕಚ್ಚಾಶಕ್ತಿ ಲಭ್ಯವಿರುವಾಗ ಇಲೆಕ್ಟ್ರಾನಿಕ್ಸ್ ಬಳಕೆಗೆ ಸಹ ಬಳಸಲಾಗುತ್ತದೆ.

ಎಂಟು ಸಿಬ್ಬಂದಿಗೆ ತರಬೇತಿ

ಹು-ಧಾ ಪೊಲೀಸ್ ಕಮಿಷನರೇಟ್ ವ್ಯಾಪ್ತಿಯಲ್ಲಿ ಮೊಬೈಲ್ ಕಮಾಂಡ್ ಸೆಂಟರ್‌ನಿಂದ ಯಾವ ರೀತಿ ಕಾರ್ಯನಿರ್ವಹಿಸಬೇಕೆಂಬ ಕುರಿತು ಇಬ್ಬರು ಅಧಿಕಾರಿ ಹಾಗೂ ಎಂಟು ಸಿಬ್ಬಂದಿ ತರಬೇತಿ ಪಡೆದಿದ್ದಾರೆ. ಮಿಸ್ಟ್ರಾಲ್ ಸಂಸ್ಥೆಯಿಂದ ಸಿದ್ಧಪಡಿಸಲಾದ ಎಂಸಿಸಿ ವಾಹನಗಳನ್ನು ಈಗಾಗಲೇ ಗುಜರಾತ್‌ನ ಅಹ್ಮದಾಬಾದ್, ಮೈಸೂರಿನ ಪೊಲೀಸ್ ಇಲಾಖೆಯಲ್ಲಿ, ದೆಹಲಿಯ ಎನ್‌ಎಸ್‌ಜಿ ಹಾಗೂ ಆಸ್ಸಾಂ ಮತ್ತು ಮೈಸೂರು-ಮಂಡ್ಯ ಹೈವೇ ಪೆಟ್ರೋಲಿಂಗ್‌ಗೆ ಬಳಸಲಾಗುತ್ತಿದೆ. ನಾಗಪುರ ಹಾಗೂ ದೆಹಲಿ ಪೊಲೀಸ್ ಇಲಾಖೆಯವರು ಬೇಡಿಕೆ ಇಟ್ಟಿದ್ದರು. ಈಗ ಅವರಿಗೆ ಸರಬರಾಜು ಮಾಡುವುದು ಮಾತ್ರ ಬಾಕಿ ಉಳಿದಿದೆ. ಗುಜರಾತ್, ಹೈದರಾಬಾದ್ ಪೊಲೀಸರು ಸೇರಿದಂತೆ ದೇಶದ ಇನ್ನಿತರೆ ರಾಜ್ಯದ ಪೊಲೀಸ್ ಇಲಾಖೆಯವರು ಈ ವಾಹನಗಳ ಸರಬರಾಜಿಗೆ ಬೇಡಿಕೆಗಳನ್ನಿಟ್ಟಿದ್ದಾರೆ. ಈ ಕುರಿತು ಮಾತುಕತೆಗಳು ನಡೆದಿವೆ.

● ಅಮಾನುಲ್ಲಾ ಖಾನ್,
ಡೆಲಿವರಿ ಮ್ಯಾನೇಜರ್, ಮಿಸ್ಟ್ರಾಲ್ ಸಲ್ಯೂಷನ್ಸ್

ಎಂಸಿಸಿ ವಾಹನ ಯಶಸ್ವಿ ಬಳಕೆ

ಮೊಬೈಲ್ ಕಮಾಂಡ್ ಸೆಂಟರ್ ಕಾರ್ಯಾಚರಣೆಗಾಗಿ ವಾಹನ ತಯಾರಿಕಾ ಸಂಸ್ಥೆಯರಿತ ತಜ್ಞರಿಂದ ಸಿಬ್ಬಂದಿ ತರಬೇತಿ ಪಡೆದಿದ್ದಾರೆ. ಮೊಬೈಲ್ ಕಮಾಂಡರ್ ಸೆಂಟರ್ ವಾಹನವನ್ನು ಕೆಸಿಸಿ ಬ್ಯಾಂಕ್ ಶತಮಾನೋತ್ಸವ ಹಾಗೂ ಹೋಳಿ ಹುಣ್ಣಿಮೆ ವಿಧಾನಸಭೆ ಚುನಾವಣೆ ಬಂದೋಬಸ್ತ್, ಸಿದ್ಧಾರೂಢಸ್ವಾಮಿ ಮಠ ಜಾತ್ರೋತ್ಸವ, ಎಐಸಿಸಿ ಅಧ್ಯಕ್ಷ ರಾಹುಲ್ ಗಾಂಧಿ ಜನಾಶೀರ್ವಾದ ಯಾತ್ರೆ, ಆರ್‌ಎಸ್‌ಎಸ್ ಪಥಸಂಚಲನ ನೇರಿದಂತೆ ದೊಡ್ಡದೊಡ್ಡ ಸಭೆ-ಸಮಾರಂಭ ಹಾಗೂ ಬೃಹತ್ ಮೆರವಣಿಗೆ ಸಂದರ್ಭಗಳಲ್ಲಿ ಬಳಸಿಕೊಳ್ಳಲಾಗಿದೆ. ಆಹಾರಧಾನ್ಯ ಹಿಸ್ಟೆಲಿಯುಳ್ಳವರನ್ನು ಪತ್ತೆ ಮಾಡುವಲ್ಲಿ, ಆಹಿತಕರ ಘಟನೆಗಳನ್ನು ತಡೆಗಟ್ಟುವಲ್ಲಿ ಹಾಗೂ ಶಾಂತಿ-ಸುವ್ಯವಸ್ಥೆ ಕಾಪಾಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ.

● ರೇಣುಕಾ ಸುಕುಮಾರ,
ಡಿಸಿಪಿ, ಕಾನೂನು ಮತ್ತು ಸುವ್ಯವಸ್ಥೆ ವಿಭಾಗ, ಹು-ಧಾ ಕಮಿಷನರೇಟ್.

ವಿನ್ಯಾಸ: ಬಸವರಾಜ ಅಂಗಡಿ